# ಅಧ್ಯಯನ – 16 Study XVI

# ಪಾಪ ವಿಮೋಚನೆಯ ಸೇವೆ ಅಥವಾ ಪಾಪ ಪ್ರಾಯಶ್ಚಿತ್ತ ಸಂಧಾನ

## The Ministry of Reconciliation or At-one-ment

**ಈ ಸೇವೆಯು ರಾಜವಂಶಸ್ಥ ಯಾಜಕತ್ವಕ್ಕೆ ಬದ್ಧವಾಗಿದೆ – ಪಾಪ ಪ್ರಾಯಶ್ಚಿತ್ತ ಸಂಧಾನದ ಬಗ್ಗೆ ಬೋಧಿಸಲು ಅಭಿಷೇಕಗೊಂಡಿದೆ – ಸಂತೋಷಕರ ಸಮಾಚಾರವನ್ನು ಯಾಕೆ ಮೆಚ್ಚಿಕೊಳ್ಳಲಿಲ್ಲ? ಈ ಸೇವೆಯ ಫಲಿತಾಂಶ – ಹಿಂಸೆ ಮತ್ತು ಮಹಿಮೆ – ಇದು ಸ್ವಾಮಿ ಭಕ್ತಿಯನ್ನು ಯಾವ ರೀತಿಯಲ್ಲಿ ಪರೀಕ್ಷಿಸುತ್ತದೆ? – ಮುಂಬರುವ ಪ್ರಾಯಶ್ಚಿತ್ತ ಸಂಧಾನದಲ್ಲಿ ನಂಬಿಗಸ್ತರು ಮಾತ್ರವೇ ಪಾಲುದಾರರಾಗುತ್ತಾರೆ.**

**"ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳದೆ ದೇವರಿಂದ ನೇಮಿಸಲ್ಪಟ್ಟು ವಹಿಸಿಕೊಳ್ಳುತ್ತಾನೆ ; ಆರೋನನು ಸಹಾ ದೇವರಿಂದಲೇ ನೇಮಿಸಲ್ಪಟ್ಟು ಆ ಗೌರವವನ್ನು ವಹಿಸಿಕೊಂಡನಲ್ಲಾ, ಹಾಗೆಯೇ ಕ್ರಿಸ್ತನು ಸಹಾ ತನ್ನನ್ನು ಘನಪಡಿಸಿಕೊಂಡು ತನ್ನನ್ನು ತಾನೇ ಮಹಾ ಯಾಜಕನನ್ನಾಗಿ ಮಾಡಿಕೊಳ್ಳಲಿಲ್ಲ"** (ಇಬ್ರಿಯ 5:4–5)

**ಪುನಃಸಂಧಾನ ಅಥವಾ ಪಾಪಪ್ರಾಯಶ್ಚಿತ್ತ ಸಂಧಾನದ ಸೇವೆಯಲ್ಲಿ** ಸಮಗ್ರ ರಾಜ ವಂಶಸ್ಥ ಯಾಜಕತ್ವವು ಭಾಗವಹಿಸಿದೆ ಮತ್ತು ಇದರ ನಮ್ಮ ಕರ್ತನಾದ ಯೇಸು ಕ್ರಿಸ್ತನು ಶ್ರೇಷ್ಠ ಮಹಾ ಯಾಜಕನಾಗಿದ್ದಾನೆ. ಎಲ್ಲಾ ಯಾಜಕರೂ ಸುವಾರ್ತಾಯುಗದಲ್ಲೆಲ್ಲಾ ನೆರವೇರಿದ 'ಉತ್ತಮವಾದ ಯಜ್ಞ'ದಲ್ಲಿ ಪಾಲುತೆಗೆದು ಕೊಂಡಿರುತ್ತಾರೆ. ಅದು ಪೂರೈಸಿದಾಗಲೇ ಕೊನೆಗೊಳ್ಳುವುದು (ರೋಮಾ. 12:1 ನೋಡಿರಿ). ಈ ರೀತಿಯಲ್ಲಿ ಕ್ರಿಸ್ತನ ಶ್ರಮೆಯಲ್ಲಿ ಪಾಲುತೆಗೆದುಕೊಳ್ಳುವವರೆಲ್ಲರೂ ಅದರಂತೆ ಅವರು ಭವಿಷ್ಯದಲ್ಲಿನ ಮಿಲಿಯಾಂತರ ಯುಗದ ರಾಜ್ಯದಲ್ಲಿ ನಡೆಯುವ ಮಹಾ ಮತ್ತು ಭವ್ಯವಾದ ಪ್ರಾಯಶ್ಚಿತ್ತ ಸೇವೆಯಲ್ಲಿ ಆತನ ಮಹಿಮೆಯಲ್ಲಿಯೂ ಪಾಲುತೆಗೆದುಕೊಳ್ಳುವರು.

ಈ ಸಹಾಯಕ–ಯಾಜಕರುಗಳ ಬಗ್ಗೆ "ಅವರು ಸ್ವಭಾವಸಿದ್ಧರಾಗಿ ಇತರರಂತೆ ದೇವರ ಕೋಪಕ್ಕೆ ಗುರಿಯಾಗಿದ್ದರು" (ಎಫೆಸ 2:3) ಮತ್ತು ಈ ಯಾಜಕತ್ವಕ್ಕೆ ದೇವರಿಂದ ಕರೆಯಲ್ಪಡುವ ಮೊದಲು ದೇವರೊಂದಿಗೆ ಪುನಃಸಂಧಾನ ಅಥವಾ ಪಾಪ ಪ್ರಾಯಶ್ಚಿತ್ತವನ್ನು ಪಡಕೊಳ್ಳಬೇಕಾಗಿತ್ತು. ಯಾಕೆಂದರೆ "ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳದೆ ದೇವರಿಂದ ನೇಮಿಸಲ್ಪಟ್ಟವರು ಮಾತ್ರವೇ ವಹಿಸಿಕೊಳ್ಳುತ್ತಾನೆ". ನಾವು ಈ ಪ್ರಾಯಶ್ಚಿತ್ತ ಸಂಧಾನವನ್ನು ಶ್ರೇಷ್ಠ ಮಹಾ ಯಾಜಕನಾದ ನಮ್ಮ ವಿಮೋಚಕನ ಕೈಯಿಂದ ಪಡಕೊಂಡ ನಂತರವೇ ನಾವು ಸಹ–ತ್ಯಾಗಿಗಳು, ಸಹ–ಮಧ್ಯಸ್ತಗಾರರು, ಸಹ–ಸಂಧಾನಕಾರರು, ಸಹ ಪ್ರಾಯಶ್ಚಿತ್ತ ಸಂಧಾನಕಾರರು ಎಂದು ಎಣಿಸಲ್ಪಡುತ್ತೇವೆ.

ದೇವರ ಮಗನಾಗಿ ಅಥವಾ ಯಾಜಕನಾಗಿ ಪುತ್ರತ್ವದ ಆತ್ಮನನ್ನು ಹೊಂದಿದವರು ಇನ್ನುಮುಂದೆ ಪುನಃ ಸಂಧಾನದ ಅಥವಾ ಪಾಪ ಪ್ರಾಯಶ್ಚಿತ್ತ ಸಂಧಾನದ ಕಾರ್ಯವನ್ನು ಪ್ರಾರಂಭಿಸುವಂತೆ ಆತನ ಸಾಮರ್ಥ್ಯ ಮತ್ತು ಅವಕಾಶಗಳಿಗೆ ತಕ್ಕಂತೆ ಆ ಆತ್ಮನಿಂದ ನಿಯೋಜಿಸಲ್ಪಡುತ್ತಾರೆ. ಶ್ರೇಷ್ಠ ಮಹಾ ಯಾಜಕನಂತೆ ಪ್ರತಿಯೊಬ್ಬರೂ ಪವಿತ್ರಾತ್ಮನ ನಡಿಸುವಿಕೆಯನ್ನು ಗ್ರಹಿಸಿಕೊಂಡು "ದೇವರ ಆತ್ಮವು ನನ್ನ ಮೇಲೆ ಅದೆ. ಆತನು ನನ್ನನ್ನು ಬಡವರಿಗೆ (ಈಗ ಹೆಮ್ಮೆಯುಳ್ಳವರಿಗೂ, ಅಹಂಕಾರಿಗಳಿಗೂ ಮತ್ತು ಕಠಿಣ ಹೃದಯವುಳ್ಳವರಿಗೂ ಅಲ್ಲ) ಶುಭವರ್ತಮಾನವನ್ನು ಸಾರುವುದಕ್ಕೆ ಅಭಿಷೇಕಿಸಿದನು. ಮನಮುರಿದವರನ್ನು ಕಟ್ಟಿ ವಾಸಿಮಾಡುವುದಕ್ಕೂ, ಸೆರೆಯವರಿಗೆ ಬಿಡುಗಡೆ ಯಾಗುವುದನ್ನೂ, ಬಂಧಿಗಳಿಗೆ ಕದ ತೆರೆಯುವದನ್ನೂ ಪ್ರಸಿದ್ಧಿಪಡಿಸುವುದಕ್ಕೂ ಕರ್ತನು ನೇಮಿಸಿರುವ ಶುಭ ವರುಷ" (ಯೆಶಾಯ 61:1) ಎಂದು ಹೇಳಿಕೊಳ್ಳುವನು. ಈ ಕಾಲದಲ್ಲಿ ದೇವರು ತನ್ನ ಚಿಕ್ಕ ಹಿಂಡನ್ನು ಸಜೀವ ಯಜ್ಞವೆಂದು ವಿಮೋಚಕನ ಅರ್ಹತೆಯ ಮೂಲಕ ಅಂಗೀಕರಿಸಿಕೊಳ್ಳುವುದಕ್ಕೆ ಸಂತೋಷಿಸುತ್ತಾನೆ.

ಅಪೋಸ್ತಲನಾದ ಪೌಲನು ಒಬ್ಬ ಸಹಾಯಕ–ಯಾಜಕನಾಗಿ, ನಮ್ಮ ವಿಮೋಚಕ ತ್ಯಾಗದ ಮೂಲಕ ನೆರವೇರಿದ ಈಡುಬಲಿಯ ಬಗ್ಗೆ ತನ್ನ ಸಂಪರ್ಕದಲ್ಲಿ ಬರುವವರಿಗೆ, 'ಕೇಳುವ ಕಿವಿಯುಳ್ಳವರಿಗೆ' 'ಎಲ್ಲರಿಗಾಗಿ ಈಡುಬಲಿ' ಎಂದು ಪ್ರಸಂಗಿಸುವ, ಎಲ್ಲರೂ ದೇವರೊಂದಿಗೆ ಪುನಃ ಸಂಧಾನ ಅಥವಾ ಪ್ರಾಯಶ್ಚಿತ್ತ ಸಂಧಾನ ಹೊಂದಿಕೊಂಡು ಕೂಡಲೇ ನೀತಿಯ ಮಾರ್ಗದಲ್ಲಿ ನಡೆಯಬೇಕೆಂದು ಬೋಧಿಸುವ ಕಾರ್ಯಕ್ಕಾಗಿ ಪವಿತ್ರಾತ್ಮನ ಸಹವಾಸದಿಂದ ಅನುಭವವನ್ನು ಹೊಂದಿದನು.

ಈ ಬಗ್ಗೆ ಅಪೋಸ್ತಲನ ಹೇಳಿಕೆಯನ್ನು 2 ಕೊರಿಂಥ 5:17–20ರಲ್ಲಿ ಹೀಗೆ ನೋಡಬಹುದು :–

"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು. (ಹಳೇ ಪಾಪಗಳು, ಆಶೆಗಳು, ನಿರೀಕ್ಷೆಗಳು) ಇದೆಲ್ಲಾ ಈ ಹೊಸದು ದೇವರಿಂದಲೇ ಉಂಟಾದದ್ದು. ಆತನು ಕ್ರಿಸ್ತನ ಮೂಲಕ ನಮ್ಮನ್ನು ತನಗೆ ಸಮಾಧಾನ ಪಡಿಸಿಕೊಂಡು ಸಮಾಧಾನ (Kattalage – ಇದೇ ಪದವನ್ನು ರೋಮಾ. 5:11 ರಲ್ಲಿ 'ಅಟೋನ್‌ಮೆಂಟ್' (ಸಮಾಧಾನ ಸ್ಥಿತಿ) ಎಂಬುದಾಗಿ ಭಾಷಾಂತರಿಸಲಾಗಿದೆ). ಸಂಧಾನದ ವಿಷಯವಾದ ಸೇವೆಯನ್ನು ನಮಗೆ ಅನುಗ್ರಹಿಸಿದ್ದಾನೆ. ಆ ಸಮಾಧಾನ ವಾಕ್ಯವೇನೆಂದರೆ, ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ (ಯಾಕೆಂದರೆ ಅವರ ದಂಡವು ಕರ್ತನಿಂದ ಭರಿಸಲಾಗಿದೆ) ಲೋಕವನ್ನು ಕ್ರಿಸ್ತನಲ್ಲಿ ಸಮಾಧಾನಪಡಿಸಿಕೊಳ್ಳುತ್ತಿದ್ದನೆಂಬುದೇ. ಅದನ್ನು (ಶುಭ ಸಮಾಚಾರದ ಸುವಾರ್ತೆಯನ್ನು) ಸಾರುವ ಸೇವೆಗೆ (ದೇವರು) ನಮ್ಮನ್ನು (ರಾಜವಂಶಸ್ಥ ಯಾಜಕರು) ನೇಮಿಸಿದ್ದಾನೆ.

ನಾವು (ದೇವರು ನಮ್ಮನ್ನು ಕರೆದಿರುವುದರಿಂದ, ಯಾಜಕತ್ವದ ಮೂಲಕ ಈ ಸೇವೆಯನ್ನು ಆತನ ಹೆಸರಿನಲ್ಲಿ ನಮಗೆ ನೀಡಿರುವುದರಿಂದ, ಮತ್ತು ಈ ಭಾಗ್ಯ ಸಂದೇಶವನ್ನು ಪ್ರಕಟಿಸಬೇಕಾಗಿರುವುದರಿಂದ) ಕ್ರಿಸ್ತನ (ನಮ್ಮ ಮೇಲಾಧಿಕಾರಿಯೂ, ಮಹಾ ಯಾಜಕನೂ, ದೇವರು ಪ್ರತಿನಿಧಿಯೂ ಆಗಿರುವ) ರಾಯಭಾರಿ ಗಳಾಗಿದ್ದೇವೆ. ದೇವರೇ ನಮ್ಮ ಮೂಲಕ ಬುದ್ಧಿಹೇಳುವ ಹಾಗಾಯಿತು. ದೇವರೊಂದಿಗೆ ಸಮಾಧಾನವಾಗಿರೆಂದು (ಸಂಧಾನರಾಗಿರೆಂದು) ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ" 2 ಕೊರಿಂಥ 5:20.

ಈ ಸಂತೋಷಕರ ಸಂದೇಶವು ಸರಿಯಾದ ಮೆಚ್ಚುಗೆಪಡೆದಿದ್ದು, ಎಲ್ಲಾ ಸ್ಥಳಗಳಲ್ಲಿಯೂ, ಎಲ್ಲಾ ವರ್ಗಗಳಲ್ಲಿಯೂ ಉತ್ತಮ ಪ್ರತಿಕ್ರಿಯೆ ತರುವುದಾಗಿರ ತಕ್ಕದ್ದು. ಆದರೆ ಇದು ಸಾಮಾನ್ಯವಾಗಿ ತಿರಸ್ಕರಿಸಲ್ಪಡುತ್ತಿದೆ. ರಾಜ ವಂಶಸ್ಥ ಯಾಜಕತ್ವದ ಬಗ್ಗೆ ಹೇಳುವ – "ನಾವು ಕೇಳಿದ ಸಂಗತಿಯನ್ನು (ನಮ್ಮಲ್ಲಿ) ಯಾರು ನಂಬಿದ್ದರು? ಕರ್ತನ ಬಾಹುವು ಯಾರಿಗೆ ಗೋಚರವಾಗಿತ್ತು?" (ಯೆಶಾಯ 53:1; ಯೋಹಾನ 12:38) ಎಂದು ಪ್ರವಾದಿಯು ಇದನ್ನು ಕೂಗಿ ಹೇಳುತ್ತಾನೆ. ನಮ್ಮ ಕರ್ತನಾದ ದೇವರು ಅನೇಕರಿಗೆ ರಾಜ ವಂಶಸ್ಥ ಯಾಜಕತ್ವದ ಕರೆ ನೀಡುವನಾದರೂ ತುಲನಾತ್ಮಕವಾಗಿ ಕೆಲವರಿಗೆ ಮಾತ್ರವೇ ಇದು ಫಲೋತ್ಪಾದಕವಾಗಿದೆ. ಯಾಕೆಂದರೆ "ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳದೆ ದೇವರಿಂದ ನೇಮಿಸಲ್ಪಟ್ಟು ವಹಿಸಿಕೊಳ್ಳುತ್ತಾನೆ".

ಸಾಮಾನ್ಯವಾಗಿ ಈ ಸಂದೇಶವು ತಿರಸ್ಕರಿಸಲ್ಪಟ್ಟ ಕಾರಣವು ಸ್ಪಷ್ಟವಾಗಿಯೇ ಇದೆ; ದೇವರೊಂದಿಗೆ ಮೈತ್ರೀಕರಣ, ಪಾಪ ವಿಮೋಚನೆಯ ಸಂಧಾನ ಇವುಗಳ ಅರ್ಥ ಪಾಪವನ್ನು ವಿರೋಧಿಸಿ ನಿವಾರಣೆ ಮಾಡುವುದು; ದೇವರೊಂದಿಗೆ ಸಮಾಧಾನವೆಂದರೆ, ನಮ್ಮ ಪತನಗೊಂಡ ಮಾನವ ಸ್ವಭಾವದಲ್ಲಿ ಭದ್ರವಾಗಿರುವ ಎಲ್ಲಾ ಬಲಹೀನತೆಗಳ, ನೀತಿಭ್ರಷ್ಟ ಆಕಾಂಕ್ಷೆಗಳ ವಿರುದ್ಧವಾಗಿ ಹೋರಾಟದ ಪ್ರಯತ್ನ. ಇದರ ಅರ್ಥ ಪಾಪದ ಸೇವೆಯಿಂದ, ನೈತಿಕತೆಯ ಸೇವೆಗೆ ಸಂಪೂರ್ಣವಾಗಿ **ಬದಲಾವಣೆ** ಅಥವಾ **ಪರಿವರ್ತನೆ**ಯಾಗುವುದು. ಪಾಪವನ್ನು ಕಡೆಗಣಿಸುವ ಅನೇಕರು (ಅದರ ಒಟ್ಟಾದ ಅಥವಾ ಕನಿಷ್ಟವಾಗಿ ಕಡಿಮೆಯಾದ ರೂಪದಲ್ಲಿ) ದೇವರೊಂದಿಗೆ ಸಮಾಧಾನ ಹೊಂದಲು ಹಂಬಲಿಸಿ, 'ದೇವರ ಮಕ್ಕಳಿಗೆ ಮಾತ್ರವೇ' ದೊರಕುವ ಆತನ ಆಶೀರ್ವಾದಗಳ ಬಗ್ಗೆ ಆಸಕ್ತಿ ಯುಳ್ಳವರಾಗಿದ್ದು, ನೀತಿವಂತಿಕೆಗಾಗಿ ಸ್ವಯಂ ಸುಧಾರಣೆಯ ಮೂಲಕ ಪ್ರಾರಂಭಿಸಿ, ತಮ್ಮ ಸ್ವಂತ ಬಲಹೀನತೆಗಳೂ ಬಹಳ ದೊಡ್ಡದ್ದಾಗಿದ್ದು ಅವನ್ನು ಗೆಲ್ಲಲು ತಮ್ಮಿಂದ ಸಾಧ್ಯವಿಲ್ಲವೆಂದೂ, ಅಲ್ಲದೇ ಇಡೀ ಪ್ರಪಂಚವು ಪಾಪದ ಕಡೆಗೆ ಹೊಂದಿಕೊಂಡಿದೆ ಎಂಬುದನ್ನೂ ಕಂಡುಕೊಳ್ಳುತ್ತಾರೆ. ಹುಟ್ಟಿದಂದಿನಿಂದ ಇರುವ ಈ ಗುಲಾಮತನದಿಂದ ಮುಕ್ತಿಪಡೆಯುವ ಸಾಧ್ಯತೆಯುಳ್ಳವರು ಮಾತ್ರ ಬಿಡುಗಡೆಯನ್ನು ಬಯಸುವವರು, "ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವುದಿಲ್ಲ" (ಯೋಹಾನ 14:6) ಎಂಬ ಒಡೆಯನ ಸಾಕ್ಷಿಗೆ ಗಮನಕೊಡುವವರು; ಆತನೊಬ್ಬನೇ ಮಧ್ಯಸ್ತಗಾರನು, 'ಮಾರ್ಗವೂ, ಸತ್ಯವೂ, ಜೀವವೂ' ಆಗಿದ್ದಾನೆ. ಇದಕ್ಕೂ ಹೆಚ್ಚಾಗಿ ಈ ಲೋಕದ ದೇವರು ಹೆಚ್ಚಾದ ಜನರ ಮನಸ್ಸನ್ನು ಅಸತ್ಯದಿಂದ ಕುರುಡಾಗಿಸಿದ್ದಾನೆ, ಹೀಗಾಗಿ ಅವರು ವಿಮೋಚಕನ ಮೂಲಕವಾದ ಪಾಪವಿಮೋಚನೆಯ ಸಂಧಾನದಿಂದ ದೊರೆಯುವ ಸೌಲಭ್ಯಗಳನ್ನು ಮೆಚ್ಚಿಕೊಳ್ಳದವರಾಗಿದ್ದಾರೆ ಎಂದು ಅಪೋಸ್ತಲನು ತಿಳಿಸುತ್ತಾನೆ.

ಈ ಸಂಧರ್ಭಗಳ ಅಡಿಯಲ್ಲಿ, ಪಾಪದ ಫಲವು ಹೆಚ್ಚುತ್ತಾ ಇದೆ. ದೇವರ ನಿಷ್ಟಾವಂತ ರಾಯಭಾರಿಗಳು ಕ್ರಿಸ್ತನ ಹೆಸರಿನಲ್ಲಿ, ಆತನ ಪರವಾಗಿ (ಆತನ ದೇಹದ ಅಂಗಗಳಾಗಿ) ಅಂದರೆ ಇದರ ಅರ್ಥ ಸಹಾಯಕ ಯಾಜಕರುಗಳು ಶ್ರೇಷ್ಟ ಮಹಾ ಯಾಜಕನ ಹೆಜ್ಜೆಜಾಡನ್ನು ಅನುಸರಿಸಬೇಕು. – ಆತನೊಂದಿಗೆ ನೀತಿವಂತರ ಸಲುವಾಗಿ ಶ್ರಮೆಯನ್ನು ಅನುಭವಿಸಬೇಕೋ? ಎಂಬ ಸತ್ಯವು ಆಶ್ಚರ್ಯವೇ ? 'ಪಾಪ ನಿವಾರಣೆ ಎಂಬ ಪದವನ್ನು' ಸ್ಪಷ್ಟವಾಗಿ ಸಾರಿದ ಮಹಾ ಯಾಜಕನು ಅಲಕ್ಷ್ಯಕ್ಕೊಳಗಾಗಿದ್ದಾನೆ, ತಿರಸ್ಕರಿಸಲ್ಪಟ್ಟಿದ್ದಾನೆ ಹಾಗೂ

ಪ್ರೀತಿ ಮತ್ತು ನೀತಿವಂತಿಕೆಯನ್ನು ಅನುಸರಿಸುತ್ತೇವೆಂದು ಹೇಳಿಕೊಳ್ಳುವವರಿಂದಲೇ ಶಿಲುಬೆಗೆ ಜಡಿಯಲ್ಪಟ್ಟಿದ್ದಾನೆ. ಅಪೋಸ್ತಲರನ್ನು ಸಹಾ ಅವರ ನಂಬಿಗಸ್ತರಾಗಿದ್ದ ಕಾರಣ ಅವರನ್ನು ದೌರ್ಜನ್ಯದಿಂದ ನಡೆಸಿಕೊಳ್ಳಲಾಯಿತು. ಇವರು ಈ ನಂಬಿಕೆಯಲ್ಲಿದ್ದರಿಂದ 'ಸಮಸ್ತವನ್ನು ಸರಿಪಡಿಸುವ' 'ಸಮಾಧಾನದ ವಾಕ್ಯವನ್ನು' ಸಂಧಾನ ಮಾಡಲು ನಿರಾಕರಿಸಿದರು. ಸಮಾಧಾನವೆಂಬ ಮಾತಿನೊಂದಿಗೆ ಸಂಧಾನಮಾಡಿಕೊಳ್ಳಲು ನಿರಾಕರಿಸಿದ ಕಾರಣ ಅದೇ ರೀತಿಯಲ್ಲಿ ತಪ್ಪಾಗಿ ನಡೆಸಿಕೊಳ್ಳಲಾಯಿತು.

'ನನ್ನ ಸಲುವಾಗಿ ನಿಮ್ಮನ್ನು ಹಗೆಮಾಡುವರು' 'ನನ್ನ ಸಲುವಾಗಿ ಅವರು ಎಲ್ಲಾ ರೀತಿಯ ಸುಳ್ಳು ಆಪಾದನೆಗಳನ್ನು ನಿಮ್ಮ ಮೇಲೆ ಹೊರಿಸುವರು', 'ಲೋಕವು ನಿಮ್ಮನ್ನು ಹಗೆಮಾಡಿದರೆ ಆಶ್ಚರ್ಯ ಪಡಬೇಡಿರಿ, ನಿಮ್ಮನ್ನು ಹಗೆ ಮಾಡುವ ಮೊದಲೇ ಅದು ನನ್ನನ್ನೂ ಹಗೆಮಾಡಿತೆಂದು ನಿಮಗೆ ತಿಳಿದದೆ' ಎಂಬ ಮಹಾ ಬೋಧಕನ ಮಾತುಗಳು 'ಈ ಕಾಲದ ಅಂತ್ಯದವರೆಗೂ' ಸತ್ಯವಾಗಿವೆ. ಮತ್ತು ಅವುಗಳು ಎಂದಿನಂತೆ ಇಂದಿಗೂ ಸತ್ಯವಾಗಿವೆ. ಆತನ ರಾಯಭಾರತ್ವವನ್ನು ಪ್ರಾಮಾಣಿಕವಾಗಿ ನೆರವೇರಿಸುವವರು, ದೇವರ ಪೂರ್ಣವಾದ ಸಮಾಲೋಚನೆಯನ್ನು ಪ್ರಕಟಿಸುವುದನ್ನು ವರ್ಜಿಸದೇ ಇರುವವರು ಕ್ರಿಸ್ತನ ಶ್ರಮದ ಬಗ್ಗೆ ಸ್ವಲ್ಪವಾದರೂ ತ್ವರಿತವಾಗಿ ಅರಿತುಕೊಳ್ಳುವರು ಮತ್ತು **"ನನ್ನ ನಿಮಿತ್ತವಾಗಿ ನಿಮ್ಮನ್ನು ನಿಂದಿಸಿ, ಹಿಂಸೆ ಪಡಿಸಿ ನಿಮ್ಮಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು"** "ನಿನ್ನನ್ನು ದೂಷಿಸುವವರ ದೂಷಣೆಗಳು ನನ್ನ ಮೇಲೆ ಬಂದವು" (ಮತ್ತಾಯ 5:11) ಎಂಬ ಕರ್ತನ ಮಾತುಗಳ ಸತ್ಯತೆಯನ್ನು ಅರಿತುಕೊಳ್ಳುವರು – ಮತ್ತಾಯ 10:22, ಕೀರ್ತನೆ 69:9 ಮತ್ತು ರೋಮಾ. 15:3.

ಇಲ್ಲಿಯೂ ಸಹಾ ನಾವು ದೇವರ ಯೋಜನೆಯ ಅದ್ಭುತವಾದ ಜ್ಞಾನವನ್ನು ನೋಡುತ್ತೇವೆ; ಅಭಿಷೇಕಿಸುವ ಆತ್ಮನು ಪ್ರಚೋಧಿಸುವ ಆತನ 'ಸಂಧಾನ ವೇದವಾಕ್ಯದ ಯಾಜಕ ಸೇವೆ'ಯನ್ನು ಮಾಡುವಾಗ, ಪ್ರತಿಯೊಬ್ಬ ಯಾಜಕನೂ ಆತನ ಸಮಂಜಸವಾದ ಸೇವೆಯಲ್ಲಿ ತನ್ನನ್ನು ತಾನು ಪವಿತ್ರವೂ, ದೇವರು ಒಪ್ಪಿಕೊಳ್ಳತಕ್ಕದ್ದೂ ಆದ ಜೀವಂತ ಬಲಿಯಾಗಿ ಸಮರ್ಪಿಸಿಕೊಳ್ಳುವ ಅಗತ್ಯತೆಯನ್ನು ಕಂಡುಕೊಳ್ಳುತ್ತಾನೆ – ರೋಮಾ. 12:1.


ಆದುದರಿಂದ, ಪ್ರತಿಯೊಬ್ಬ ಪ್ರತಿಷ್ಠಿತನೂ ಸಹಿಸಿಕೊಳ್ಳುವ ಸ್ವಯಂ ಅರ್ಪಣೆ ಮತ್ತು ಶ್ರಮೆಯ ಪರಿಮಾಣವು ಪ್ರತಿಯೊಬ್ಬ ವಿಶ್ವಾಸಿಯೂ ರಾಯಭಾರಿಗಳಾಗಿ ಅವರ ಪ್ರಾಮಾಣಿಕತೆಯ ಪರಿಮಾಣವಾಗುತ್ತದೆ (ದೇವರ ದೃಷ್ಟಿಯಲ್ಲಿ – ಆದರೆ ಮಾನವನು ಅದನ್ನು ಗ್ರಹಿಸಲು ಸಾಧ್ಯವಿಲ್ಲ). ಕ್ರಿಸ್ತನ ಸಲುವಾಗಿ, ಸತ್ಯದ ಸಲುವಾಗಿ ಶ್ರಮೆ ತಾಳಲು ವಿಫಲನಾಗುವ ಪ್ರತಿಯೊಬ್ಬ ಯಾಜಕನೂ ಆ ಕಾರಣದಿಂದ ಅಪ್ರಮಾಣಿಕನಾದ ರಾಯಭಾರಿ ಮತ್ತು ನೂತನ ಒಡಂಬಡಿಕೆಯ ಅಪ್ರಮಾಣಿಕ ಸೇವಕ ಎನಿಸಿಕೊಳ್ಳುತ್ತಾನೆ. ಈಗ ಶಿಲುಬೆಯ ಒಳ್ಳೆಯ ಸೈನಿಕರಂತೆ ಪ್ರಾಮಾಣಿಕರಾಗಿರುವವರಿಗೆ ಮಿಲಿಯಾಂತರ ಯುಗದ ಅನುಕೂಲಕರ ಪರಿಸ್ಥಿತಿಗಳಲ್ಲಿ ಮಹಿಮೆಯುಳ್ಳ ಸಂಧಾನಕಾರ್ಯದಲ್ಲಿ ಮಹಾ ಶ್ರೇಷ್ಠ ಯಾಜಕನೊಂದಿಗೆ ಭಾಗವಹಿಸುವ ಬೆಲೆಕಟ್ಟಲಾಗದ ಸೌಭಾಗ್ಯವನ್ನು ದಯಪಾಲಿಸಲಾಗುವುದು. ನಾವು ಆತನೊಂದಿಗೆ ಶ್ರಮೆಯನ್ನು ಅನುಭವಿಸುವುದಾದರೆ, ನಾವು ಆತನೊಂದಿಗೆ ಆಳ್ವಿಕೆಯನ್ನು ಸಹಾ ಮಾಡುವೆವು. ನಾವು ಆತನನ್ನು ನಿರಾಕರಿಸಿದರೆ, ಆಗ ಆತನೂ ನಮ್ಮನ್ನು ಸಹಾ ನಿರಾಕರಿಸುವನು – ರೋಮಾ. 8:17; 2:12, 13; ತೀತ 01:16.

**"ನಿನ್ನ ಜಯಮಾಲೆಯನ್ನು ಯಾರೂ ಅಪಹರಿಸದಂತೆ ನೋಡಿಕೋ"** – ಪ್ರಕಟನೆ 3:11.

**"ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವೆಂಬ ಜಯಮಾಲೆಯನ್ನು ಕೊಡುವೆನು"** – ಪ್ರಕಟನೆ 2:10.

* * * * * * * *

# Studies in the Scripture



*The Most Comprehensive Bible Study Available!*

**THE DIVINE PLAN OF THE AGES -** Gives an outline of the Divine Plan revealed in the Bible, relating to man's redemption and restitution. Contains 358 pages. Cloth bound pocket edition.

**THE TIME IS AT HAND -** Deals with Bible chronology and time prophecies, identifies the Antichrist, and. points out the time and manner of our Lord's return. Contains 371 pages. Cloth bound pocket edition.

**THY KINGDOM COME -** Discusses time prophecies relating to the work of the church at this end of the age, the restoration of Israel, and the setting up of Christ's kingdom. One chapter pertains to the Great Pyramid of Egypt. Contains 384 pages. Cloth bound edition.

**THE BATTLE OF ARMAGEDDON -** Shows the dissolution of the present order. It discusses many prophecies relating to the end of the age, noting especially our Lord's great prophecy of Matt. 24. Contains 660 pages. Cloth bound pocket edition.

**THE ATONEMENT BETWEEN GOD AND MAN -** Contains 498 pages devoted to the fact and philosophy of Christ's atoning work; the nature of man, the divine punishment for sin, the truth about hell, and the operation of the Holy Spirit. Cloth bound pocket edition.

**THE NEW CREATION -** The first chapter deals with the Genesis account of creation. The remainder of the book discusses the laws, duties, privileges, and hopes of the consecrated followers of Jesus. Contains 738 pages. Cloth bound pocket edition.

---

Write publishers for further information.

**For Translated Kannada Publications :**

**BIBLE STUDENTS**